# ಕಾನೂನು ಮಾಪನಶಾಸ್ತ್ರ ನಿಯಂತ್ರಕರು ಬೆಂಗಳೂರುರವರ ನಡವಳಿಗಳು

**ವಿಷಯ:** ತೂಕ, ಅಳತೆ, ತೂಕ ಮತ್ತು ಅಳತೆ ಸಾಧನಗಳ ದುರಸ್ತಿ ದಾರರುಗಳಿಗೆ GST ನೊಂದಣಿ ಪ್ರಮಾಣ ಪತ್ರ ಸಲ್ಲಿಸುವುದಕ್ಕೆ ವಿನಾಯಿತಿ ನೀಡುವ ಬಗ್ಗೆ.

**ಉಲ್ಲೇಖ: 1** ಕೇಂದ್ರ ಕಛೇರಿ ಜ್ಞಾಪನ ಪತ್ರ ಸಂಖ್ಯೆ:ಕಾಮಾಇ/ಸನಿತಾ/ಸಿಆರ್-89/19-20, ದಿ:8-11-2019.

2. ಮೆ: ಗಂಗೋತ್ರಿ ಎಂಟರ್ ಪ್ರೈಸಸ್, ದುರಸ್ತಿದಾರರು ಬೆಂಗಳೂರು ಸಂಸ್ಥೆಯ ಪ್ರಕರಣಕ್ಕೆ ಸಂಬಂಧಿಸಿದ ಆದೇಶ ಸಂಖ್ಯೆ: ಕಾಮಾಇ/ಲೈ.ನ/ಸಿಆರ್-52/2019-20, ದಿನಾಂಕ:22-10-2019.

3. ಸರ್ಕಾರದ ಪತ್ರ ಸಂಖ್ಯೆ: ಆನಾಸ 03 ಕಾಮಾಸೇ 2020 ದಿ:8-5-2023 (ಮೇಲ್ಮನವಿ ಅರ್ಜಿ ಸಂಖ್ಯೆ: ಆನಾಸ 03 ಕಾಮಾಸೇ 2020,ದಿ:27-4-2023)

<u>ಪ್ರಸ್ತಾವನೆ:</u>

ಉಲ್ಲೇಖಿತ-1ರ ಕೇಂದ್ರ ಕಛೇರಿ ಜ್ಞಾಪನ ಪತ್ರದಲ್ಲಿ ಕಾನೂನು ಮಾಪನಶಾಸ್ತ್ರ ಇಲಾಖೆಯಲ್ಲಿ ತೂಕ, ಅಳತೆ, ತೂಕ ಮತ್ತು ಅಳತೆ ಸಾಧನಗಳ ತಯಾರಿಕಾ/ಮಾರಾಟ/ದುರಸ್ತಿ ಅನುಜ್ಞಾಪತ್ರಗಳ 2020ನೇ ಸಾಲಿನ ನವೀಕರಣಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ನೀಡಿದ್ದು, ಈ ಮಾರ್ಗಸೂಚಿಯಲ್ಲಿನ ಕ್ರಮ ಸಂಖ್ಯೆ 14.ರಲ್ಲಿ ಮೆ:ಗಂಗೋತ್ರಿ ಎಂಟರ್ ಪ್ರೈಸಸ್, ಬೆಂಗಳೂರು ದುರಸ್ತಿದಾರರ ಪ್ರಕರಣಕ್ಕೆ ಸಂಬಂಧಿಸಿದಂತೆ ನೀಡಲಾಗಿರುವ ಉಲ್ಲೇಖ-2ರ ತೀರ್ಪಿನ ಆದೇಶದಲ್ಲಿ ವಿಧಿಸಿರುವ ಷರತ್ತುಗಳನ್ನು ಉಲ್ಲೇಖ-1ರಲ್ಲಿ ನೀಡಲಾಗಿರುವ ಷರತ್ತುಗಳೊಂದಿಗೆ ಕಡ್ಡಾಯವಾಗಿ ಪಾಲಿಸುವಂತೆ ಸೂಚನೆ ನೀಡಲಾಗಿತ್ತು.

ಈ ಸಂಬಂಧ ನಿಯಂತ್ರಕರು, ಕಾನೂನು ಮಾಪನಶಾಸ್ತ್ರ ಇಲಾಖೆ ಇವರ ಜ್ಞಾಪನ ಪತ್ರ ಸಂಖ್ಯೆ: ಕಾಮಾಇ/ಸನಿತಾ/ಸಿಆರ್-89/2019-20 ದಿನಾಂಕ:08-11-2019ರಲ್ಲಿ ವಿಧಿಸಿರುವ ನಿಬಂಧನೆಗಳನ್ನು ಪ್ರಶ್ನಿಸಿ, ಕರ್ನಾಟಕ ಉಚ್ಛ ನ್ಯಾಯಾಲಯ ಬೆಂಗಳೂರುರವರಲ್ಲಿ ರಿಟ್ ಪಿಟಿಷನ್ ಸಂಖ್ಯೆ:3334/2020ನ್ನು ದಾಖಲಿಸಿದ ಸಂಬಂಧ ಮಾನ್ಯ ಉಚ್ಛ ನ್ಯಾಯಾಲಯವು ದಿನಾಂಕ:04-03-2020 ರಂದು ಆದೇಶ ಹೊರಡಿಸಿದ್ದು, ಸದರಿ ಆದೇಶದಲ್ಲಿ ಸರ್ಕಾರದ ಕಾರ್ಯದರ್ಶಿಗಳು, ಆಹಾರ ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳು ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆ ಇವರಿಗೆ The Legal Metrology Act, 2009 ರ Section 50(e) ರನುಸಾರ ಮೇಲ್ಮನವಿಯನ್ನು ಪರಿಗಣಿಸಿ, ನಾಲ್ಕು ವಾರಗಳ ಒಳಗಾಗಿ ಇತ್ಯರ್ಥಪಡಿಸುವಂತೆ ನಿರ್ದೇಶನ ನೀಡಿರುತ್ತದೆ.

ಮುಂದುವರೆದು ಸದರಿ ಮಾರ್ಗಸೂಚಿಯ ಕ್ರಮ ಸಂಖ್ಯೆ 14.ರ ಷರತ್ತುಗಳಿಗೆ ಸಂಬಂಧಿಸಿದಂತೆ, ಶ್ರೀ ವಿ.ಎನ್.ಲೋಕೇಶ್, ಮೆ:ಜಯಲಕ್ಷ್ಮೀ ಸ್ಕೇಲ್ಸ್, ಕನಕಪುರ ಮುಖ್ಯ ರಸ್ತೆ, ಬೆಂಗಳೂರು ಮತ್ತು ಇತರರು ಸರ್ಕಾರದ ಕಾರ್ಯದರ್ಶಿಗಳು, ಆಹಾರ ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳು ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆ, ವಿಕಾಸಸೌಧ, ಬೆಂಗಳೂರು ಇವರಲ್ಲಿ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿದ್ದ ಸಂಬಂಧ,

ಸದರಿ ಮೇಲ್ಮನವಿ ಅರ್ಜಿಯನ್ನು ಸರ್ಕಾರವು ಪರಿಶೀಲಿಸಿ ಉಲ್ಲೇಖಿತ-3ರಲ್ಲಿ ಮೇಲ್ಮನವಿ ವಿಚಾರಣೆ ಕುರಿತು ದಿನಾಂಕ: 27-04-2023ರಂದು ಅಂತಿಮ ಆದೇಶವನ್ನು ಹೊರಡಿಸಿರುತ್ತದೆ. ಸದರಿ ಆದೇಶದಲ್ಲಿ "ದುರಸ್ತಿ ಲೈಸೆನ್ಸ್ ದಾರರ ವಾರ್ಷಿಕ ವಹಿವಾಟು Central Goods & Services Tax Act, 2017ರ section 2(6) ರನ್ವಯ ನಿಗಧಿಪಡಿಸಿರುವ ಮೊತ್ತವನ್ನು ದಾಟದಿರುವಂತಹ ದುರಸ್ತಿ ಲೈಸೆನ್ಸ್‌ದಾರರಿಗೆ ಮಾತ್ರ ಸಂಬಂಧಪಟ್ಟಂತೆ ಉಲ್ಲೇಖಿತ-1ರ ಮಾರ್ಗಸೂಚಿಯ ಕ್ರಮ ಸಂಖ್ಯೆ 14.ರಲ್ಲಿನ ಷರತ್ತನ್ನು ರದ್ದುಪಡಿಸಿದೆ ಹಾಗೂ ಈ ಸಂಬಂಧ ದುರಸ್ತಿದಾರರುಗಳು ಜಿ.ಎಸ್.ಟಿ. ಕಾಯ್ದೆ ಅಡಿಯಲ್ಲಿ ನಿಗಧಿಪಡಿಸಿರುವ ವಹಿವಾಟು ಮೊತ್ತ ದಾಟಿರುವುದಿಲ್ಲವೆಂದು ಸಂಬಂಧಪಟ್ಟ ದುರಸ್ಥಿದಾರರು ತಮ್ಮ ದೃಢೀಕರಣ ಸಲ್ಲಿಸುವುದು" ಎಂದು ಆದೇಶಿಸಿರುತ್ತದೆ. ಈ ಸಂಬಂಧ ಈ ಕೆಳಗಿನಂತೆ ಆದೇಶ ಹೊರಡಿಸಿದೆ.

**ಆದೇಶ ಸಂಖ್ಯೆ: ಕಾಮಾಇ/ಸನಿತಾ/ಜಿ.ಎಸ್.ಟಿ ಸಿಆರ್-22/2023-24, ದಿನಾಂಕ:17-07-2023.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಈ ಕಛೇರಿಯ ಜ್ಞಾಪನ ಪತ್ರ ಸಂಖ್ಯೆ: ಕಾಮಾಇ/ಸನಿತಾ/ಸಿಆರ್-89/19-20, ದಿನಾಂಕ 08-11-2019ರಲ್ಲಿನ ಮಾರ್ಗಸೂಚಿಯ ಕ್ರಮ ಸಂಖ್ಯೆ 14.ರಲ್ಲಿ ನೀಡಲಾಗಿರುವ ಸೂಚನೆಯನ್ನು ಸರ್ಕಾರದ ಮೇಲ್ಮನವಿ ಅರ್ಜಿ ತೀರ್ಪಿನಲ್ಲಿ ನೀಡಿರುವ ಆದೇಶ ಸಂಖ್ಯೆ: ಆನಾಸ 03 ಕಾಮಾಸೇ 2020, ದಿ:27-04-2023ರ ಸೂಚನೆಯಂತೆ ರದ್ದುಪಡಿಸಿದೆ ಹಾಗೂ ದುರಸ್ತಿದಾರರುಗಳು ಅವರುಗಳ ಅನುಜ್ಞಾಪತ್ರಗಳನ್ನು ಸ್ವಯಂಚಾಲಿತ ನವೀಕರಣ ಮಾಡಿಕೊಳ್ಳುವ ಸಂದರ್ಭದಲ್ಲಿ ನವೀಕರಣ ಪ್ರಸ್ತಾವನೆಯನ್ನು ಸಂಬಂಧಿಸಿದ ಕ್ಷೇತ್ರವ್ಯಾಪ್ತಿಯ ಸಹಾಯಕ ನಿಯಂತ್ರಕರುಗಳಿಗೆ ಸಲ್ಲಿಸಿ, ಪ್ರಸಕ್ತ ಸಾಲಿಗೆ ತಮ್ಮ ವಾರ್ಷಿಕ ವಹಿವಾಟು Central Goods & Services Tax Act, 2017ರ section 2(6) ರನ್ವಯ ನಿಗಧಿಪಡಿಸಿರುವ ಮೊತ್ತವನ್ನು ದಾಟಿರುವುದಿಲ್ಲವೆಂದು ಸಹಾಯಕ ನಿಯಂತ್ರಕರಿಂದ ಕಡ್ಡಾಯವಾಗಿ ದೃಢೀಕರಣ ಪಡೆದು ಇ-ಮಾಪನ್ ತಂತ್ರಾಂಶದಲ್ಲಿ ದೃಢೀಕರಣ ಪತ್ರವನ್ನು ಅಪ್ಲೋಡ್ ಮಾಡಿ ನವೀಕರಿಸಿಕೊಳ್ಳುವ ಷರತ್ತಿಗೊಳಪಟ್ಟು ಆದೇಶಿಸಿದೆ ಹಾಗೂ ಸಂಬಂಧಿಸಿದ ಸಹಾಯಕ ನಿಯಂತ್ರಕರುಗಳು ನವೀಕರಣ ಸಂದರ್ಭದಲ್ಲಿ ದುರಸ್ಥಿದಾರರುಗಳ ವಾರ್ಷಿಕ ವಹಿವಾಟನ್ನು ನಿಯಮಾನುಸಾರ ಪರಿಶೀಲಿಸಿ ದೃಢೀಕರಣ ನೀಡುವಂತೆ ಸಹ ಸೂಚಿಸಿದೆ.

ನಿಯಂತ್ರಕರು,

ಕಾನೂನು ಮಾಪನಶಾಸ್ತ್ರ ಇಲಾಖೆ

17/7

ಗೆ,

1) ರಾಜ್ಯದ ಎಲ್ಲಾ ಉಪನಿಯಂತ್ರಕರುಗಳಿಗೆ
2) ರಾಜ್ಯದ ಎಲ್ಲಾ ಸಹಾಯಕ ನಿಯಂತ್ರಕರುಗಳಿಗೆ ಕಳುಹಿಸಿಕೊಡುತ್ತಾ, ತಮ್ಮ ಕ್ಷೇತ್ರವ್ಯಾಪ್ತಿಯಲ್ಲಿ ಬರುವ ಎಲ್ಲಾ ದುರಸ್ತಿದಾರರುಗಳಿಗೆ ಈ ಆದೇಶದ ಪ್ರತಿಯನ್ನು ನೀಡಿ ಸಹಿಯನ್ನು ಪಡೆದು ಕಛೇರಿ ದಾಖಲೆಯಲ್ಲಿರಿಸಲು ಸೂಚಿಸಿದೆ.
3) ರಾಜ್ಯದ ಎಲ್ಲಾ ನಿರೀಕ್ಷಕರುಗಳಿಗೆ ಮಾಹಿತಿಗಾಗಿ.

4) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಆಹಾರ ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು

5) ಅಧೀಕ್ಷಕರು(ತಾ) ಮತ್ತು (ಆ), ಆಪ್ತ ಶಾಖೆ, ರಕ್ಷತಾ ಕಡತ.